ಶ್ರೀ ಕೆ. ಹೆಚ್. ಹನುಮೇಗೌಡ :— ಔಷಧಗಳು ಇಲ್ಲದಿದ್ದರೆ ಸಂಬಂಧಪಟ್ಟ ಆಸ್ಪತ್ರೆಗಳ ಡಿ. ಎಂ. ಒ. ಅವರು ಅವರಿಗೆ ಸಿಗದಿ ಮಾಡಿರುವ ಒಟ್ಟು ಔಷಧದಲ್ಲಿ ಕಾಲು ಭಾಗವನ್ನು ಪ್ರೈವೇಟ್ ಫರಮ್‌ನಿಂದ ಕೊಂಡುಕೊಳ್ಳುವುದಕ್ಕೆ ಅವಕಾಶ ಕೊಡಲಾಗಿದೆ ಎಂದು ಹೇಳಿದಿರಿ. ಆದರೆ ನನಗೆ ಬಂದಿರುವ ವರ್ತಮಾನದ ಪ್ರಕಾರ ಪ್ರೈವೇಟ್ ಫರಮ್‌ನವರು ತಾವು ಸರಬರಾಜು ಮಾಡಿದ ಔಷಧಗಳ ಬಗ್ಗೆ ಸರ್ಕಾರದವರು ತಿಂಗಳುಗಟ್ಟಲೆ ಕೆಲವು ಸಲ ವರ್ಷಗಟ್ಟಲೆ ಬಿಲ್‌ನ್ನು ಪಾಸ್ ಮಾಡುವುದಿಲ್ಲವೆಂಬ ಕಾರಣದಿಂದ ಅವರು ಔಷಧವಿದ್ದರೂ ಸರಬರಾಜು ಮಾಡುತ್ತಿಲ್ಲ. ಈ ಕಾರಣದಿಂದ ಅವರು ಬಿಲ್ ಕೊಟ್ಟ ಕೆಲವು ದಿವಸಗಳಲ್ಲಿಯೇ ಪಾಸ್ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಸುಧಾಸ್ ಅಸ್ನೂರೆ:— ಅದು ಒಳ್ಳೆಯ ಸಲಹೆ, ಮಾಡೋಣ.

ಶ್ರೀ ಜೆ ಎಲ್. ಕಬಾಡಿ :— ದವಾಖಾನೆಯಲ್ಲಿ ಬ್ಯಾಂಡೇಜ್ ಮತ್ತು ಔಷಧಗಳು ಇಲ್ಲದಿದ್ದರೆ ಅವುಗಳನ್ನು ಹೊರಗಡೆ ಕೊಳ್ಳುವುದಕ್ಕೆ ಸಿವಿಲ್ ಸರ್ಜನ್ ಅವರಿಗೆ ಅಧಿಕಾರ ಇಲ್ಲಿಯವರೆಗೆ ಇರಲಿಲ್ಲ; ಆದರೆ ಈಗ ಈ ವಿಚಾರದಲ್ಲಿ ಅವರು ಒಟ್ಟು ಮೊಲಗಿನಲ್ಲಿ ಕಾಲು ಭಾಗದಷ್ಟು ಹಣವನ್ನು ಈ ರೀತಿ ಹೊರಗಡೆ ಔಷಧ ಕೊಳ್ಳಲು ಅವಕಾಶವಿದೆ ಎಂದು ಹೇಳಿದಿರಿ. ಆ ಆರ್ಡರ್ ಎಂದಿನಿಂದ ಜಾರಿಯಲ್ಲಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಸುಧಾಸ್ ಅಸ್ನೂರೆ :— ಯಾವ ತಾರೀಖಿನಿಂದ ಜಾರಿಯಲ್ಲಿದೆ ಎಂಬ ಬಗ್ಗೆ ಪಿವರ ಈಗ ನನ್ನ ಬಳಿ ಇಲ್ಲ.

ಅಧ್ಯಕ್ಷರು :— ಕಳೆದ ಸಲ ಮಾನ್ಯ ಆರೋಗ್ಯ ಮಂತ್ರಿಗಳು ಈ ವಿಚಾರದಲ್ಲಿ ಉತ್ತರ ಕೊಟ್ಟಿದ್ದಾರೆ. ಆದ ಕಾರಣ ಅದು ಹಿಂದಿನಿಂದ ಜಾರಿಯಲ್ಲಿದೆ.

**Payment of D. A. to Officials of Aided Institutions:*

49. SRI V. M. Ghadi (Haliyal)— Will the Minister for Education be pleased to state:—

(*a*) the reasons for the officials working in the Aided Institutions in not getting increased amount of D. A. whenever there is a revision, in the same way as their counterparts in Government service;

(*b*) Whether the Government has any proposal to arrange to extend such facilities to officials of Aided Institutions along with the Government servants?

SRI M. MALLIKARJUNASWAMY (Minister for Education) –

(*a*) As at present issue of separate orders of Government in Education Department is necessary. As such some time is required for Government to issue separate orders in respect of employees in Aided Educational Institutions.

(*b*) This is under examination.

ಶ್ರೀ ಪಿ. ಎಂ. ಘಾಡಿ:— ಇವತ್ತಿನ ದಿವಸ ಸರಕಾರದವರು ಡಿ. ಎ. ಮಂಜೂರು ಮಾಡಿದ ತಕ್ಷಣ ಸರಕಾರೀ ನೌಕರರಿಗೆ ಆದು ಸಿಗುತ್ತಾ ಇದೆ. ಆದರೆ ಸಹಾಯ ಪೋಷಿತ ಸಂಸ್ಥೆಗಳಲ್ಲಿ ಕೆಲಸ ಮಾಡತಕ್ಕ ಶಿಕ್ಷಕರಿಗಾಗಲೀ, ನೌಕರರಿಗಾಗಲೀ ತಕ್ಷಣ ಸಿಗುತ್ತಾ ಇಲ್ಲ. ನನ್ನ ಸ್ವಂತ ಅನುಭವದಿಂದ ಹೇಳುವುದಾದರೆ, ಸರಕಾರದವರು ಡಿ. ಎ. ಮಂಜೂರು ಮಾಡಿದ 6 ತಿಂಗಳಾದ ಮೇಲೋ ವರ್ಷವಾದ ಮೇಲೋ ಅವರಿಗೆ ಡಿ. ಎ. ಸಿಕ್ಕುತ್ತಾ ಇದೆ. ಇದಕ್ಕೆ ಕಾರಣ ಕೇಳಿದರೆ, ಆದೇಶ ಹೊರಡಿಸುವುದಕ್ಕೆ ಕಾಲದ ಅಗತ್ಯವಿದೆ ಎಂದು ಹೇಳುತ್ತಾರೆ. ಇದಕ್ಕೆ ಕಾರಣ ತಿಳಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ:— ಕಾರಣ ಇಷ್ಟೆ. 1974 ರ ಅಡಿಷನಲ್ ಸ್ಯಾಲರೀಸ್, ಎಮೊಲ್ಯುಮೆಂಟ್ಸ್ ಅಂಡ್ ಕಂಪಲ್ಸರಿ ಡಿಪಾಸಿಟ್ ಆಕ್ಟ್ ಪ್ರಕಾರವಾಗಿ ಇನ್ನು ಅಡಿಷನಲ್ ಡಿಯರ್‌ನೆಸ್ ಅಲೋಯನ್ಸ್ ಕೊಟ್ಟಿದ್ದೇವೆ. ಅದರಲ್ಲಿ 50 ಪರ್ಸೆಂಟ್ ಡಿಪಾಜಿಟ್‌ಗೆ ಹೋಗುತ್ತಿದೆ. This matter is before the Finance Department and this will be given.

ಶ್ರೀ ವಿ ಎಂ ಘಾಡಿ: — ಫೈನಾನ್ಸ್ ಡಿಪಾರ್ಟ್‌ಮೆಂಟಿನಲ್ಲಿ ಇದೆ ಎಂದು ಹೇಳುತ್ತೀರಿ. ಇದು ಎಷ್ಟು ದಿವಸದಿಂದ ಇದೆ? ಇದನ್ನು ಪರಿಶೀಲನೆ ಮಾಡಿ ಕಾರ್ಯಗತ ಮಾಡುವುದಕ್ಕಾಗುತ್ತದೆಯೇ ನಿನ್ನೆ ತಾನೇ ಮೊನ್ನೆ ಹಣಕಾಸಿನ ಸಚಿವರು ಸರಕಾರೀ ನೌಕರರಿಗೆ ಡಿ. ಎ. ಯನ್ನು ಕೊಡುವುದಾಗಿ ಡಿಕ್ಲೇರ್ ಮಾಡಿದ್ದಾರೆ ಇದು ಸಹಾಯ ಪೋಷಿತ ಸಂಸ್ಥೆಗಳ ಶಿಕ್ಷಕರಿಗಾಗಲೀ, ನೌಕರರಿಗಾಗಲೀ ಒಂದು ವರ್ಷದ ಮೇಲೆ ಸಿಕ್ಕುತ್ತದೆ. ಈ ದೃಷ್ಟಿಯಿಂದ ಇದನ್ನು ಈ ವರ್ಷವೇ ಅವರಿಗೆ ಸಿಗುವಂತೆ ಮಾಡಲು ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ:— ಆದಷ್ಟು ಶೀಘ್ರವಾಗಿ ಕೊಡಲಾಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ :— ಸಹಾಯ ಘೋಷಿತ ಸಂಸ್ಥೆಗಳ ನೌಕರರಿಗೆ ಪ್ರತ್ಯೇಕ ಆದೇಶವನ್ನು ಹೊರಡಿಸುವುದಕ್ಕೆ ಕಾಲ ಬೇಕು; ಇದು ಪರಿಶೀಲನೆಯಲ್ಲಿ ಇದೆ ಎಂದು ಹೇಳುತ್ತೀರಿ. ಇದು ಪರಿಶೀಲನೆಯಲ್ಲಿ ಎಷ್ಟು ದಿವಸದಿಂದ ಇದೆ? ಸಹಾಯ ಘೋಷಿತ ಸಂಸ್ಥೆಯ ನೌಕರರಿಗೆ ವೇತನ ಮತ್ತು ಡಿ ಎ. ಕೊಡುವುದರಲ್ಲೇ ತಾರತಮ್ಯದ ಲೋಪವಿರುವುದರಿಂದ, ಇದನ್ನು ಜಾಗ್ರತೆಯಾಗಿ ಮಾಡಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ :— ಮಾಡಿಸುತ್ತೇವೆ.

**Appointment of Principal of Marathi Training College, Vadgaon*

101. ‡SRI B. B. SAYANAK (Belgaum) :—

Will the Minister for Education be pleased to state :

(*a*) whether the Additional Director of Public Instruction had rejected the appointment of the candidate to the post of Principal of the Marathi Training College, Vadagaon, Belgaum, selected by the Selection Committee and approved by the Management of the College ;

(*b*) if so, the grounds on which the selection was rejected ;

(*c*) whether it is a fact that the management had appealed to the Education Minister on 26th November 1973 in the matter ;

(*d*) if so, the decision taken by the Education Minister on this appeal ?

SRI M. MALLIKARJUNASWAMY (Minister for Education) :—

(*a*) Yes